# ಈಗ ಪಂಜಾಬ್ ಸರದಿ

## ಸಿಎಎ ವಿರುದ್ಧ ಪಂಜಾಬ್ ವಿಧಾನಸಭೆಯಲ್ಲೂ ನಿರ್ಣಯ

ನವದೆಹಲಿ: ಕೇರಳದ ಬಳಿಕ ಈಗ ಪಂಜಾಬ್ ವಿಧಾನಸಭೆ ಕೂಡ ಪೌರತ್ವ ಕಾಯ್ದೆಯ ವಿರುದ್ಧ ನಿರ್ಣಯ ಅಂಗೀಕರಿಸಿದೆ. ಅಷ್ಟೇ ಅಲ್ಲ ಸಿಎಎ ವಿರುದ್ಧ ಸುಪ್ರೀಂ ಕೋರ್ಟ್‌ಗೆ ನಾವೂ ಅರ್ಜಿ ಸಲ್ಲಿಸಲಿದ್ದೇವೆ ಎಂದು ಪಂಜಾಬ್ ಸಿಎಂ ಕ್ಯಾ.ಅಮರೀಂದರ್ ಸಿಂಗ್ ಶುಕ್ರವಾರ ಘೋಷಿಸಿದ್ದಾರೆ.

ಪೌರತ್ವ ಕಾಯ್ದೆಯು ದೇಶವನ್ನು ವಿಭಜಿಸುವಂಥದ್ದು, ಎಲ್ಲರಿಗೂ ಸಮಾನತೆ ಒದಗಿಸುವಂಥ ಮುಕ್ತ ಮತ್ತು ನ್ಯಾಯಸಮ್ಮತ ಪ್ರಜಾಪ್ರಭುತ್ವಕ್ಕೆ ವಿರುದ್ಧವಾದದ್ದು. ಈ ಕಾನೂನು ಕೆಲವು ಸಮುದಾಯದ ಭಾಷೆ, ಸಾಂಸ್ಕೃತಿಕ ಅಸ್ಮಿತೆಗೆ ಅಪಾಯಕಾರಿಯಾದದ್ದು ಎಂದು ಪಂಜಾಬ್ ವಿಧಾನಸಭೆ ಕೈಗೊಂಡ ನಿರ್ಣಯದಲ್ಲಿ ತಿಳಿಸಲಾಗಿದೆ. ಆಮ್ ಆದ್ಮಿ ಪಕ್ಷ ಮತ್ತು ಲೋಕ್ ಇನ್ಸಾಫ್ ಪಕ್ಷವೂ ಈ ನಿರ್ಣಯಕ್ಕೆ ಬೆಂಬಲ ಸೂಚಿಸಿವೆ.

**ಜಾಮೀನು ಷರತ್ತು ಉಲ್ಲಂಘಿಸಿದರೇ ಆಜಾದ್?:** ಪೌರತ್ವ ಕಾಯ್ದೆ ವಿರೋಧಿ ಪ್ರತಿಭಟನೆ ವೇಳೆ ಬಂಧಿತರಾಗಿ ಜಾಮೀನಿನ ಮೇರೆಗೆ ಬಿಡುಗಡೆಯಾದ ಕೆಲವೇ ಗಂಟೆಗಳಲ್ಲಿ ಭೀಮ್ ಆರ್ಮಿ ಮುಖ್ಯಸ್ಥ ಚಂದ್ರಶೇಖರ್ ಆಜಾದ್ ಐತಿಹಾಸಿಕ ಜಾಮಾ ಮಸೀದಿಗೆ ಭೇಟಿ ನೀಡಿದ್ದಾರೆ. ಅಷ್ಟೇ ಅಲ್ಲದೆ, ಮಸೀದಿಯಲ್ಲಿ ನೆರೆದಿದ್ದ ಜನರ ಮುಂದೆ ಸಂವಿಧಾನದ ಮೂಲ ಆಶಯಗಳನ್ನು ಓದಿದ್ದಾರೆ. ಇದಕ್ಕೂ ಮುನ್ನ ಭಗವಾನ್ ವಾಲ್ಮೀಕಿ ಮಂದಿರ, ಗುರುದ್ವಾರ ಬಾಂಗ್ಲಾ ಸಾಹಿಬ್‌ಗೂ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದ್ದರು. ಜಾಮೀನು ನೀಡುವ ವೇಳೆ ದೆಹಲಿ ಕೋರ್ಟ್, 'ದೆಹಲಿ ಚುನಾವಣೆ ಮುಗಿಯುವವರೆಗೂ ಇಲ್ಲಿ ಯಾವುದೇ ಧರಣಿಯಲ್ಲಿ ಪಾಲ್ಗೊಳ್ಳಬಾರದು ಮತ್ತು 4 ವಾರ ಕಾಲ ದೆಹಲಿಗೆ ಭೇಟಿ ನೀಡಬಾರದು' ಎಂದು ಷರತ್ತು ಹಾಕಿತ್ತು. ಆದರೆ ಬಿಡುಗಡೆ ಬೆನ್ನಲ್ಲೇ ಜಾಮಾ ಮಸೀದಿಗೆ ಭೇಟಿ ನೀಡುವ ಮೂಲಕ ಜಾಮೀನು ಷರತ್ತು ಉಲ್ಲಂಘಿಸಿದ್ದೀರಲ್ಲವೇ ಎಂಬ ಪ್ರಶ್ನೆಗೆ ಉತ್ತರಿಸಿದ ಆಜಾದ್, 'ನನಗೆ ಕೋರ್ಟ್‌ನ ಆದೇಶದ ಪ್ರತಿ ಇನ್ನೂ ಬಂದಿಲ್ಲ. ಪ್ರತಿಭಟನೆ ನಡೆಸುವುದು ನನ್ನ ಹಕ್ಕು' ಎಂದಿದ್ದಾರೆ. ದೆಹಲಿ ಪೊಲೀಸರು ಕೂಡ ಪ್ರತಿಕ್ರಿಯಿಸಿ, ಆಜಾದ್ ಅವರಿಗೆ ಬಿಡುಗಡೆ ಬಳಿಕ ದೆಹಲಿ ಬಿಟ್ಟು ತೆರಳಲು 24 ಗಂಟೆಗಳ ಕಾಲಾವಕಾಶವಿದೆ. ಜಾಮಾ ಮಸೀದಿಯಲ್ಲಿ ಅವರು ಯಾವುದೇ ಪ್ರತಿಭಟನೆ ನಡೆಸಿಲ್ಲ. ಹೀಗಾಗಿ ಜಾಮೀನು ಷರತ್ತು ಉಲ್ಲಂಘಿಸಿದಂತೆ ಆಗುವುದಿಲ್ಲ ಎಂದಿದ್ದಾರೆ.

### ರಾಹುಲ್‌ಗೆ ನಡ್ಡಾ ಸವಾಲು



ಪೌರತ್ವ ಕಾಯ್ದೆ ವಿಚಾರಕ್ಕೆ ಸಂಬಂಧಿಸಿ ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಅವರು ದೇಶದ ದಾರಿ ತಪ್ಪಿಸುತ್ತಿದ್ದಾರೆ ಎಂದು ಆರೋಪಿಸಿರುವ ಬಿಜೆಪಿ ಕಾರ್ಯಾಧ್ಯಕ್ಷ ಜೆ.ಪಿ. ನಡ್ಡಾ, ಈ ಕಾನೂನಿನ ಬಗ್ಗೆ 10 ಸಾಲು ಮಾತನಾಡುವಂತೆ ರಾಹುಲ್‌ಗೆ ಸವಾಲು ಹಾಕಿದ್ದಾರೆ. ಸಿಎಎಯಿಂದ ಆಗುವ ಸಮಸ್ಯೆಯೇನು ಎಂದು ರಾಹುಲ್ ಎರಡು ವಾಕ್ಯಗಳಲ್ಲಿ ತಿಳಿಸಲಿ. ಕಾಂಗ್ರೆಸ್ ಹಾಗೂ ಎಡಪಕ್ಷಗಳಿಗೆ ದೇಶಕ್ಕಿಂತಲೂ ಅವರ ಮತ ಬ್ಯಾಂಕೇ ಮುಖ್ಯವಾಗಿದೆ. ಆದರೆ, ಪ್ರಧಾನಿ ಮೋದಿಯವರಿಗೆ ದೇಶವೇ ಮುಖ್ಯವಾಗಿದೆ ಎಂದೂ ನಡ್ಡಾ ಹೇಳಿದ್ದಾರೆ.

### ಕೇಂದ್ರ ಸಮರ್ಥನೆ

ಎನ್‌ಪಿಆರ್ (ರಾಷ್ಟ್ರೀಯ ಜನಸಂಖ್ಯಾ ನೋಂದಣಿ) ಪ್ರಕ್ರಿಯೆಗೆ ಅಳವಡಿಸಲಾಗಿರುವ ಹೊಸ ವಿಧಾನದ ಬಗ್ಗೆ ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ಕೆಲವು ರಾಜ್ಯಗಳು ಶುಕ್ರವಾರ ಆಕ್ಷೇಪ ವ್ಯಕ್ತಪಡಿಸಿವೆ. ಆದರೆ, ಕೇಂದ್ರ ಸರ್ಕಾರವು ಈ ವಿಧಾನವನ್ನು ಸಮರ್ಥಿಸಿಕೊಂಡಿದ್ದು, ಜನರು ನೀಡಬೇಕಾಗಿರುವ ಕೆಲವೊಂದು ಉತ್ತರಗಳು ಐಚ್ಛಿಕವಾಗಿದ್ದು, ಅವು ಕಡ್ಡಾಯವೇನೂ ಅಲ್ಲ ಎಂದು ಹೇಳಿದೆ.

### ಬೊಕ್ಕಸದ ಹಣ ವೆಚ್ಚ ಮಾಡುವಂತಿಲ್ಲ



ಪೌರತ್ವ ಕಾಯ್ದೆ ವಿರೋಧಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರುವ ಮುನ್ನ ಕೇರಳ ಸರ್ಕಾರ ತಮಗೆ ಮಾಹಿತಿ ನೀಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿರುವ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್, ಸರ್ಕಾರದ ವಿರುದ್ಧದ ವಾಗ್ದಾಳಿ ಮುಂದುವರಿಸಿದ್ದಾರೆ. ಕೇರಳ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸುವ ಅರ್ಜಿಗಾಗಿ ಸರ್ಕಾರದ ಬೊಕ್ಕಸದಿಂದ ಒಂದೇ ರೂಪಾಯಿಯನ್ನೂ ವೆಚ್ಚ ಮಾಡುವಂತಿಲ್ಲ ಎಂದು ಶುಕ್ರವಾರ ಖಾನ್ ತಿಳಿಸಿದ್ದಾರೆ. ಗುರುವಾರವಷ್ಟೇ ಸಿಎಂ ಪಿಣರಾಯಿ ವಿಜಯನ್ ಅವರು, 'ರಾಜ್ಯಪಾಲರು ಮೊದಲು ಸಂವಿಧಾನ ಓದಲಿ' ಎಂದಿದ್ದರು.